701 ಜಾತಿ ಪ್ರಮಾಣ ಪತ್ರಗಳನ್ನು ಯಾವುದೇ ತೊಂದರೆ ಇಲ್ಲದೆ ವಿತರಿಸಲಾಗಿದೆ.

ಅಲ್ಲದೇ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಶಾಲಾ ಮುಖೇವೇ ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಾಲಾಗಿದ್ದು ಸದರಿ ಕಾರ್ಯಕ್ರಮವು ಅಂತಿಮ ಹಂತದಲ್ಲಿದೆ.

ಆ) ಆರ್ಥಿಕ ಇಲಾಖೆಯು ಇನ್ನು ಮುಂದೆ ಯಾವುದೇ ಹೆಚ್ಚುವರಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ತೆರೆಯಬಾರದೆಂದು ಅಭಿಪ್ರಾಯ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಇ–ಆಡಳಿತ ಇಲಾಖೆಯಿಂದ ಆರಂಭಿಸ ಲಾಗುತ್ತಿರುವ ಸಾರ್ವಜನಿಕ ನಾಗರೀಕ ಕೇಂದ್ರಗಳಲ್ಲಿ ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ಸೇವೆಗಳನ್ನು ಒದಗಿಸಲು ಕ್ರಮ ವಹಿಸಲಾಗುತ್ತಿದೆ.

ಇ) ಅಟಲ್‌ಜೀ ಜನಸ್ನೇಹಿ ಕೇಂದ್ರಗಳನ್ನು ಸರ್ಕಾರದ ಆದೇಶದಂತೆ ಪ್ರತಿ ಹೋಬಳಿಗೆ ಒಂದರಂತೆ ಮಂಜೂರು ಮಾಡಲಾಗಿರುತ್ತದೆ ಹಾಗೂ ನಾಡಕಛೇರಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಂದ 100 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತವಾಗುತ್ತಿರುವ ನಾಡಕಛೇರಿಗಳಿಗೆ ಹೆಚ್ಚುವರಿ ಫ್ರಂಟ್ ಆಫೀಸ್‌ನ್ನು ಸ್ಥಾಪಿಸಲಾಗುತ್ತಿತ್ತು. ರಾಯಭಾಗ ಕಸಬಾ ಹೋಬಳಿಯಲ್ಲಿ ಪ್ರತಿ ದಿನಕ್ಕೆ ಸರಾಸರಿ 75 ಅರ್ಜಿಗಳು ಸ್ವೀಕೃತವಾಗುತ್ತಿದ್ದು, ಚಿಂಚಲಿ ಮತ್ತು ಕಂಕಣವಾಡಿ ಗ್ರಾಮಗಳು ರಾಯಭಾಗ ಹೋಬಳಿಯ ವ್ಯಾಪ್ತಿಯಲ್ಲಿದ್ದು, ಸದರಿ ಗ್ರಾಮಗಳಲ್ಲಿ ಹೆಚ್ಚುವರಿ ಫ್ರಂಟ್ ಆಫೀಸ್ ಸ್ಥಾಪಿಸುವ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಕೆರೆಗಳಿಗೆ ನೀರು ತುಂಬುವ ಯೋಜನೆ

1025 (1745); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ರಾಜ್ಯದಲ್ಲಿ ಕೆರೆಗಳಿಗೆ ನೀರು ತುಂಬುವ ಯೋಜನೆ ಜಾರಿಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಬೆಳಗಾವಿ ಜಿಲ್ಲೆ ರಾಯಭಾಗ ತಾಲ್ಲೂಕಿನ 16 ಗ್ರಾಮಗಳ ಕೆರೆಗಳಿಗೆ ಬೆಂಡವಾಡ, ಮಾವಿನ ಹೊಂಡಾ, ಮಂಟೂರ, ಬೂದಿಹಾಳ ದೇವನಹಟ್ಟಿ, ಹುಬ್ಬರವಾಡಿ, ಜೋಡಟ್ಟಿ, ಗಿರಿನಾಯಕವಾಡಿ, ಮಾಡಲಗಿ, ನಂದಿಕುರಳಿ, ಮೇಖಳಿ ಹಾಗೂ ಇನ್ನುಳಿದ ಗ್ರಾಮಗಳ ಕೆರೆಗಳಿಗೆ ಯಾವಾಗ ನೀರು ತುಂಬಿಸುವ ವ್ಯವಸ್ಥೆ ಮಾಡಲಾಗುವುದು;

ಶ್ರೀ ಎಂ. ಬಿ. ಪಾಟೀಲ್ (ಮನ್ಯ ಜಲಸಂಪನ್ಮೂಲ ಸಚಿವರು)

ಅ) ಹೌದು, ಜಲಾನಯನ ಪ್ರದೇಶದಲ್ಲಿ ನೀರಿನ ಲಭ್ಯತೆ ಮತ್ತು ಯೋಜನೆಯ ಕಾರ್ಯಸಾಧ್ಯತೆ ಇರುವೆಡೆಯಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕೈಗೊಳ್ಳಲಾಗುತ್ತಿದೆ.

ಆ) ಸದರಿ ಬೆಳಗಾವಿ ಜಿಲ್ಲೆ ರಾಯಭಾಗ ತಾಲೂಕಿನ 16 ಗ್ರಾಮಗಳ ಕೆರೆಗಳು ಜಿಲ್ಲಾ ಪಂಚಾಯತ್ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿವೆ. ಈ ಯೋಜನೆಗಳ ತಾಂತ್ರಿಕ ಕಾರ್ಯಸಾಧ್ಯತೆ ಮತ್ತು ನೀರಿನ ಲಭ್ಯತೆ ಬಗ್ಗೆ ಪ್ರಾಥಮಿಕ ಸರ್ವೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ನೀರಿನ ಲಭ್ಯತೆ ಪರಿಶೀಲಿಸಿಕೊಂಡು ಮುಂದಿನ ಅಗತ್ಯ ಕ್ರಮ ನಿಗಮದಿಂದ ಕೈಗೊಳ್ಳಲಾಗುವುದು.

ಎಂ. ಇ. ಎಸ್. ಅಡಿಯಲ್ಲಿ ನೋಂದಣಿಯಾಗಿರುವ ವಿ. ಟಿ. ಪಿ. ಗಳ ನೈಜತೆ ಹಾಗೂ ಅವುಗಳು ನೀಡುತ್ತಿರುವ ತರಬೇತಿ

1026 (1960); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಮಾಡ್ಯುಲಾರ್ ಎಂಪ್ಲಾಯಬಲ್ ಸ್ಕಿಲ್ಸ್ ಯೋಜನೆ (ಎಂ.ಇ.ಎಸ್.) ಯಡಿಯಲ್ಲಿ ಇದುವರೆವಿಗೂ ಎಷ್ಟು ವೃತ್ತಿ ತರಬೇತಿ ಕಾರ್ಯಕ್ರಮಗಳು (Vocational Training Programe (VTP)) ನೋಂದಣಿಯಾಗಿರುತ್ತದೆ? ಈ ವಿ.ಟಿ.ಪಿ.ಗಳು ನೀಡುತ್ತಿರುವ ತರಬೇತಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇಲಾಖಾ ವತಿಯಿಂದ ಪರಿವೀಕ್ಷಣೆ ನಡೆಸಲಾಗಿದೆಯೇ? ಹಾಗಿದ್ದಲ್ಲಿ, ನೋಂದಣಿಯಾಗಿರುವ ವಿ.ಟಿ.ಪಿ.ಗಳ ನೋಂದಣಿ